ಧಾರಾವಾಹಿ

# ಬನ್ನಿ, ಬೇಲೂರು ಮಠಕ್ಕೆ

**ಸ್ವಾಮಿ ಆಶುತೋಷಾನಂದ**

*(ಹಿಂದಿನ ಸಂಚಿಕೆಯಿಂದ)*



ವಸ್ತುಸಂಗ್ರಹಾಲಯದ ಒಂದು ನೋಟ

**ರಾಮಕೃಷ್ಣ ವಸ್ತುಸಂಗ್ರಹಾಲಯ**

ಹಿಂದಿನ ಮಹನೀಯರು ಈಗ ನಮ್ಮೊಡನಿಲ್ಲ. ಅವರ ಸ್ಮರಣಿಕೆಗಳನ್ನು ಬೇಲೂರು ಮಠದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ರಕ್ಷಿಸಿಡಲಾಗಿದೆ. ಅವು ಅವರ ನೆನಪು ತರುತ್ತವೆ. ಇದು ೨೦೦೧ ನೆಯ ಇಸವಿಯಲ್ಲಿ ಆರಂಭಗೊಂಡಿತು. ನಾವು ಬೇಲೂರು ಮಠದ ಮಹಾದ್ವಾರದಿಂದ ಒಳಗೆ ಪ್ರವೇಶ ಮಾಡುವಾಗ, ಎಡಗಡೆ ಈ ವಸ್ತುಸಂಗ್ರಹಾಲಯವು ಕಾಣಸಿಗುತ್ತದೆ. ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಮಹಾಸಂಘದ ಕೆಲವು ಮಹಾನ್ ಸಂನ್ಯಾಸಿಗಳು ಮತ್ತು ಭಕ್ತರಿಗೆ ಸೇರಿದ ಪರಿಕರಗಳನ್ನು ಇಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿನ ಪ್ರದರ್ಶನಗಳನ್ನು ವೀಕ್ಷಿಸುತ್ತಿರುವಾಗ, ರಾಮಕೃಷ್ಣ ಮಹಾಸಂಘದ ಇತಿಹಾಸ ಮತ್ತು ಅದರ ವೈಶಿಷ್ಟ್ಯಗಳು ತಾವೇ ತಾವಾಗಿ ನಮ್ಮ ಮುಂದೆ ತೆರೆದುಕೊಳ್ಳುವುದನ್ನು ಕಾಣಬಹುದು. ಈ ವಿಷಯದ ಬಗ್ಗೆ ತೋರಿಸಲಾಗುವ ಮೂವತ್ತು ನಿಮಿಷಗಳ ವಿಡಿಯೊ ಪ್ರದರ್ಶನವೂ ಮ್ಯೂಸಿಯಮ್‌ನ ನಮ್ಮ ಅನುಭವವನ್ನು ಸಮೃದ್ಧಗೊಳಿಸುವುದು. ಸೋಮವಾರಗಳು ಮತ್ತು ಉತ್ಸವದ ದಿನಗಳಂದು ವಸ್ತುಸಂಗ್ರಹಾಲಯ ಮುಚ್ಚಿರುತ್ತದೆ.

**ಗಂಗಾನದಿ**

ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು: "ದನಗಳು ಹೊಟ್ಟೆ ತುಂಬ ತಿಂದು, ಒಂದು ಕಡೆ ವಿಶ್ರಮಿಸಿಕೊಂಡು, ಯಾವುದೇ ಕಳವಳವಿಲ್ಲದೆ, ಆಹಾರವನ್ನು ಮೆಲುಕುಹಾಕುತ್ತ ಇರುತ್ತವೆ. ಹಾಗೆಯೇ ದೇವಸ್ಥಾನಗಳನ್ನು ಮತ್ತು ತೀರ್ಥಯಾತ್ರೆಗಳನ್ನು ಸಂದರ್ಶಿಸಿದ ನಂತರ, ಒಂದು ಏಕಾಂತ ಸ್ಥಳದಲ್ಲಿ ಕುಳಿತುಕೊಳ್ಳಬೇಕು; ಆ ತೀರ್ಥಸ್ಥಾನಗಳಲ್ಲಿ ತನಗುಂಟಾದ ಪವಿತ್ರ ಚಿಂತನೆಗಳನ್ನು ಮನಸ್ಸಿನಲ್ಲಿಯೇ ಮೆಲುಕುಹಾಕುತ್ತ, ಅವುಗಳಲ್ಲಿ ತನ್ಮಯತೆಯನ್ನು ಪಡೆದುಕೊಳ್ಳಬೇಕು. ಅವುಗಳನ್ನು ಸಂದರ್ಶಿಸಿದ ಒಡನೆ, ಮನಸ್ಸನ್ನು ಇತರ ದೃಶ್ಯಗಳು, ರುಚಿ ಮತ್ತಿತರ ಪ್ರಾಪಂಚಿಕ ವಸ್ತುಗಳ ಮೇಲೆ ಹರಿಯಬಿಡಬಾರದು. ಹಾಗೆ ಮಾಡಿದರೆ, ನಾವು ಸಂಗ್ರಹಿಸಿಕೊಂಡ ದೈವೀಸಂಸ್ಕಾರಗಳು ಮನಸ್ಸಿನಲ್ಲಿ ಚಿರಂತನವಾದ ಮುದ್ರೆಗಳನ್ನು ಮೂಡಿಸುವುದಿಲ್ಲ."

ಹೀಗೆ 'ಮೆಲುಕು ಹಾಕುವುದಕ್ಕೆ' ಗಂಗಾನದಿಯ ತಟಕ್ಕಿಂತಲೂ ಒಳ್ಳೆಯ ಸ್ಥಾನ ಬೇರೆ ಯಾವುದು ತಾನೆ ಇದೆ? ಆದ್ದರಿಂದ ಗಂಗೆಯ ದಡದ ಮೇಲೆ ಕುಳಿತುಕೊಳ್ಳೋಣ. ಅಲ್ಲಿನ ಪ್ರಶಾಂತ ವಾತಾವರಣದಲ್ಲಿ, ನಾವು ನೋಡಿದ ದೇವಾಲಯಗಳಲ್ಲಿ ನಮಗುಂಟಾದ ಅನುಭವವನ್ನು ಮತ್ತೆ ಮತ್ತೆ ಮನಸ್ಸಿನಲ್ಲೇ ಪರಿಭಾವಿಸೋಣ.

ನದಿಯ ದಡದಿಂದ ಈಶಾನ್ಯ ದಿಕ್ಕಿನಲ್ಲಿ, ದಕ್ಷಿಣೇಶ್ವರ ಕಾಳೀ ದೇಗುಲದ ಗೋಪುರ ಕಾಣಿಸುತ್ತದೆ. ನದಿಯ ಆಚೆಯ ದಡದಲ್ಲಿ, ನಾವು ಸಂದರ್ಶಿಸಬೇಕಾದ ಇನ್ನೂ ಹಲವಾರು ಯಾತ್ರಾಸ್ಥಾನಗಳಿವೆ. ಅವೆಂದರೆ, ಕಾಶಿಪುರ, ಉದ್ಬೋಧನ, ಬಲರಾಮ ಮಂದಿರ ಮುಂತಾದವು.

**ಹಳೆಯ ಮಠ**

ಮೊದಮೊದಲು ರಾಮಕೃಷ್ಣ ಮಠ ಇದ್ದದ್ದು ನೀಲಾಂಬರ ಬಾಬುವಿನ ತೋಟದ ಮನೆಯಲ್ಲಿ. ಅದು ಈಗ ಬೇಲೂರು ಮಠದ ಒಂದು ಅಂಗವೇ ಆಗಿಬಿಟ್ಟಿದೆ. ಅದನ್ನು 'ಹಳೆಯ ಮಠ' ಎಂದು ಕರೆಯುತ್ತಾರೆ. ಇದು ಬೇಲೂರು ಮಠದಿಂದ, ದಕ್ಷಿಣ ದಿಕ್ಕಿನ ಕಡೆಗೆ, ಒಂದು ಕಿಲೋಮೀಟರ್ ದೂರದಲ್ಲಿ, ಬೇಲೂರು ದೋಣಿಯ ಜೆಟ್ಟಿಯ ಸನಿಹದಲ್ಲಿಯೇ ಇದೆ. ಬೇಲೂರು ಮಠವು ರಾಮಕೃಷ್ಣ ಮಹಾಸಂಘದ ನಾಲ್ಕನೆಯ ನಿವಾಸವಾಗಿದೆ. ಮೊದಲ ಮೂರು ಸ್ಥಾನಗಳೆಂದರೆ, ಬಾರಾನಗರ ಮಠ (೧೮೮೬–೧೮೯೨), ಆಲಂಬಜಾರ್ ಮಠ (೧೮೯೨–೧೮೯೬) ಮತ್ತು ಈ ಹಳೆಯ ಮಠ (೧೮೯೮–೧೮೯೯). ಹಳೆಯ ಮಠವು ಶ್ರೀರಾಮಕೃಷ್ಣರ ಬಹುತೇಕ ಎಲ್ಲಾ ಶಿಷ್ಯರ ಪವಿತ್ರಸ್ಮೃತಿಗಳೊಂದಿಗೆ ಸಂಬಂಧಪಟ್ಟಿದೆ. ಶ್ರೀಮಾತೆಯವರು ಇಲ್ಲಿ ಹಲವಾರು ಸಲ ವಾಸಿಸಿದ್ದರು ಮತ್ತು ಅನೇಕ ಆಧ್ಯಾತ್ಮಿಕ ಸಾಧಕರಿಗೆ ಮಂತ್ರದೀಕ್ಷೆಯನ್ನು ಕೊಟ್ಟು ಅನುಗ್ರಹಿಸಿದ್ದರು.

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಎಲ್ಲ ಕೇಂದ್ರಗಳಲ್ಲಿ ಸಂಜೆಯ ಆರತಿಯ ಸಮಯದಲ್ಲಿ ಹಾಡಲಾಗುವ, "ಖಂಡನ ಭವ



ಗಂಗಾತಟ

ಬಂಧನ" ಗೀತೆಯನ್ನು ಸ್ವಾಮಿ ವಿವೇಕಾನಂದರು ರಚಿಸಿದ್ದು ಇಲ್ಲಿಯೇ. ಹಾಗೆಯೇ, "ಓಂ ಹ್ರೀಂ ಋತಂ" ಎಂದು ಆರಂಭವಾಗುವ ಸ್ತೋತ್ರವನ್ನು ಕೂಡ ಬರೆದದ್ದು ಇಲ್ಲಿಯೇ. ಇದನ್ನು ಆರತಿ ಗೀತೆಯ ನಂತರ ಹೇಳಲಾಗುತ್ತದೆ. ಹಾಗೆಯೇ, "ಆಚಂಡಾಲಾ" ಎಂದು ಆರಂಭವಾಗುವ ಶ್ರೀರಾಮಕೃಷ್ಣರ ಮೇಲಿನ ಪ್ರಸಿದ್ಧ ಸ್ತೋತ್ರವನ್ನು ಕೂಡ ಸ್ವಾಮೀಜಿ ಇಲ್ಲಿಯೇ ರಚಿಸಿದರು. ಸ್ವಾಮಿ ವಿವೇಕಾನಂದರು, ತಮ್ಮ ಶಿಷ್ಯೆಯಾದ ಮಿಸ್ ಮಾರ್ಗರೆಟ್ ನೊಬಲ್‌ಳಿಗೆ ಬ್ರಹ್ಮಚರ್ಯ ದೀಕ್ಷೆ ಕೊಟ್ಟು, 'ನಿವೇದಿತಾ' ಎಂದು ಹೆಸರು ನೀಡಿದ್ದು ಕೂಡ ಇಲ್ಲಿಯೇ. ಇದಲ್ಲದೆ, ಸ್ವಾಮೀಜಿ ಹಲವಾರು ಬ್ರಹ್ಮಚಾರಿಗಳಿಗೆ ಈ ಸ್ಥಳದಲ್ಲಿಯೇ ಸಂನ್ಯಾಸ ದೀಕ್ಷೆಯನ್ನೂ ನೀಡಿದ್ದಾರೆ.


ನೀಲಾಂಬರ ಮುಖರ್ಜಿಯ ತೋಟದ ಮನೆ

**ಇಲ್ಲಿ ನೋಡಬೇಕಾದ ಸ್ಥಳಗಳು**

**ಪೂಜಾ ಕೊಠಡಿ:** ಶ್ರೀಮಾತೆಯವರು ಇಲ್ಲಿಗೆ ಬಂದಾಗ ಇರುತ್ತಿದ್ದ ಕೊಠಡಿಯನ್ನು ಈಗ ಪೂಜಾ ಕೊಠಡಿಯನ್ನಾಗಿ ಕಾಪಾಡಿಕೊಂಡು ಬರಲಾಗುತ್ತಿದೆ. ಇದು ಈಶಾನ್ಯ ದಿಕ್ಕಿನಲ್ಲಿರುವ ಮೆಟ್ಟಿಲುಗಳ ಮೇಲೆ ಇದೆ.

**ಮಾಳಿಗೆ:** ಮೇಲಿನ ಕೊಠಡಿಯ ಪಕ್ಕದಲ್ಲಿಯೇ ಇರುವ ಅಟ್ಟದಲ್ಲಿ ಶ್ರೀಮಾತೆಯವರು ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಒಮ್ಮೆ ಧ್ಯಾನ ಮಾಡುತ್ತಿರುವಾಗ ಅವರು ಹೀಗೆ ಹೇಳಿದರು: "ನನ್ನ ಮನಸ್ಸು ಕೆಂಪು ಮತ್ತು ಬಿಳಿಯ ಬೆಳಕಿನಲ್ಲಿ ಕರಗಿಹೋಗುತ್ತಿದೆ. ಇದೇ ಸ್ಥಿತಿ ಮುಂದುವರಿದರೆ, ನನ್ನ ದೇಹ ನಿಲ್ಲುವುದಿಲ್ಲ."

ಮತ್ತೊಂದು ದಿನ, ಶ್ರೀಮಾತೆಯವರು ಧ್ಯಾನದಲ್ಲಿ ಎಷ್ಟೊಂದು ಆಳವಾಗಿ ಮಗ್ನರಾಗಿದ್ದರೆಂದರೆ, ತಮ್ಮ ಭಾವಸ್ಥಿತಿಯಿಂದ ಹೊರಬಂದ ಮೇಲೆ, ಮತ್ತೆ ದೇಹಭಾವವನ್ನು ಪಡೆದುಕೊಳ್ಳಲಾಗದೆ, ಹೀಗೆ ಉದ್ಗರಿಸಿದರು: "ಎಲ್ಲಿ ನನ್ನ ಕೈಗಳು? ಎಲ್ಲಿ ನನ್ನ ಕಾಲುಗಳು?" ಜೀವನಪರ್ಯಂತ ಅವರ ಅನುಚರೆಯಾಗಿದ್ದ ಯೋಗೀನ್ ಮಾ, ಆಗ ಶ್ರೀಮಾತೆಯವರ ಕೈ ಮತ್ತು ಕಾಲಗಳನ್ನು ಮತ್ತೆ ಮತ್ತೆ ಒತ್ತಿ ಹಿಡಿದಳು. ತದನಂತರವಷ್ಟೇ ಶ್ರೀಮಾತೆಯವರು ದೇಹಭಾವವನ್ನು ಮರಳಿ ಪಡೆದರು.

೧೮೯೩ರ ಯಾವುದೋ ಒಂದು ಸಮಯದಲ್ಲಿ, ಶ್ರೀಮಾತೆಯವರು ಇಲ್ಲಿ 'ಪಂಚತಪ'ವನ್ನು ಏಳು ದಿನಗಳ ಕಾಲ ಆಚರಿಸಿದರು. ಐದು ಅಗ್ನಿಗಳ ನಡುವೆ ಕುಳಿತು ಆಚರಿಸಬೇಕಾದ ತಪವಿದು. ನಾಲ್ಕು ದಿಕ್ಕುಗಳಲ್ಲಿಯೂ ಸೆಗಣಿಯಿಂದ ಮಾಡಿದ ಬೆರಣಿಗಳಿಂದ ಉರಿಯುವ ಅಗ್ನಿ, ಮೇಲುಗಡೆ ಸುಡುತ್ತಿರುವ ಸೂರ್ಯ– ಇವೇ ಆ ಐದು ಅಗ್ನಿಗಳು. ಶ್ರೀಮಾತೆಯವರ ವಿಷಯದಲ್ಲಿ ಈ ತಪಸ್ಸು ಒಂದಕ್ಕಿಂತ ಹೆಚ್ಚು ಉದ್ದೇಶಗಳನ್ನು ಒಳಗೊಂಡಿದೆ ಎಂದು ಹೇಳಬಹುದು. ಜಗತ್ತಿನ ಕಲ್ಯಾಣಕ್ಕಾಗಿ ಇದನ್ನು ಕೈಗೊಂಡೆನೆಂದು ಶ್ರೀಮಾತೆ ಒಮ್ಮೆ ಹೇಳಿಕೊಳ್ಳುತ್ತಾರೆ. ಇನ್ನೊಂದು ಸಂದರ್ಭದಲ್ಲಿ ತನ್ನನ್ನು ಹಿಂಬಾಲಿಸುತ್ತಿದ್ದ ಯಾವುದೋ ದುಷ್ಟಶಕ್ತಿಯನ್ನು ನಿವಾರಿಸಿಕೊಳ್ಳುವುದೇ ಇದರ ಉದ್ದೇಶವಾಗಿತ್ತೆಂದು ಹೇಳಿದ್ದಾರೆ. ಈ ಪ್ರಶ್ನೆಗೆ ಅವರು ನೀಡಿದ ಮೂರನೆಯ ಉತ್ತರವೆಂದರೆ, ಯಾವುದೇ ಮಹತ್ಕಾರ್ಯವನ್ನು ಸಾಧಿಸಲು ತಪಸ್ಸು ಆವಶ್ಯಕ ಎಂದು. ಸಾಕ್ಷಾತ್ ಉಮೆ ಕೂಡ, ಶಿವನನ್ನು ತನ್ನ ಪತಿಯನ್ನಾಗಿ ಪಡೆದುಕೊಳ್ಳಲು ತಪಸ್ಸನ್ನು ಆಚರಿಸಿದಳು ಎಂದು ಶ್ರೀಮಾತೆಯವರು ಗುರುತುಮಾಡಿ ತೋರಿಸುತ್ತಾರೆ. ಈ ಕಡೆಯ ಕಾರಣವು ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ, ಈ 'ಪಂಚತಪ'ದ ನಂತರವಷ್ಟೇ, ಅವರು ಆಧ್ಯಾತ್ಮಿಕ ಗುರುವಾಗಿ ಮಂತ್ರದೀಕ್ಷೆಯನ್ನು ಎಲ್ಲರಿಗೂ ಬಹು ದೊಡ್ಡ ರೀತಿಯಲ್ಲಿ, ನೀಡಲು ಆರಂಭಿಸಿದರು.

**ಸ್ನಾನಘಟ್ಟ**

ಒಮ್ಮೆ ಶ್ರೀಮಾತೆಯವರು ಈ ಘಾಟಿನ ಮೆಟ್ಟಿಲುಗಳ ಮೇಲೆ ಕುಳಿತುಕೊಂಡು, ಹರಿಯುತ್ತಿರುವ ಗಂಗೆಯ ಸೌಂದರ್ಯವನ್ನು ವೀಕ್ಷಿಸುತ್ತಿದ್ದರು. ಅಂದು ಹುಣ್ಣಿಮೆಯ ದಿನ. ಆ ಸಮಯದಲ್ಲಿ ಸ್ವಾಮಿ ವಿವೇಕಾನಂದರ ಮಹಾನ್ ಕಾರ್ಯದ ಬಗ್ಗೆ ಆಧ್ಯಾತ್ಮಿಕ ದರ್ಶನವೊಂದನ್ನು ಪಡೆದರು. ಅವರು ನೋಡಿದ ದೃಶ್ಯ ಹೀಗಿತ್ತು: ಶ್ರೀರಾಮಕೃಷ್ಣರು ಗಂಗೆಯ ಪ್ರವಾಹದಲ್ಲಿ ಪ್ರವೇಶ ಮಾಡಿದ್ದಾರೆ. ಅವರ ಪರಿಶುದ್ಧ ಶರೀರವು ಅದರ ಪವಿತ್ರ ಜಲದಲ್ಲಿ ಲೀನವಾಗಿ ಹೋಗಿದೆ. ಆ ಜಲವನ್ನು, "ಜೈ ಶ್ರೀರಾಮಕೃಷ್ಣ" ಎನ್ನುತ್ತ ಅಸಂಖ್ಯ ಜನಸಮೂಹದೆಡೆಗೆ ಸಿಂಪಡಿಸುತ್ತಿದ್ದಾರೆ. ಈ ದರ್ಶನವು ಶ್ರೀಮಾತೆಯವರ ಮನಸ್ಸಿನಲ್ಲಿ ಎಷ್ಟು ಅಚ್ಚಳಿಯದ ಪ್ರಭಾವವನ್ನು ಉಂಟುಮಾಡಿತೆಂದರೆ, ಬಹಳ ಕಾಲದವರೆಗೆ ಅವರು ಗಂಗೆಯನ್ನು ಪ್ರವೇಶಿಸಲು ಹಿಂಜರಿಯುತ್ತಿದ್ದರು. ಏಕೆಂದರೆ ಶ್ರೀರಾಮಕೃಷ್ಣರೇ ಅದರಲ್ಲಿ ಮಿಳಿತರಾದುದನ್ನು ಆ ದೃಶ್ಯದಲ್ಲಿ ಅವರು ಕಂಡಿದ್ದರು. ಶ್ರೀರಾಮಕೃಷ್ಣರ ವಿಶ್ವಸಾರ್ವತ್ರಿಕ ಸಂದೇಶವನ್ನು ಪ್ರಚಾರ ಮಾಡುವುದರಲ್ಲಿ ಸ್ವಾಮಿ ವಿವೇಕಾನಂದರ ಭೂಮಿಕೆಯನ್ನು ತಮ್ಮ ಆ ದರ್ಶನದಲ್ಲಿ ಶ್ರೀಮಾತೆ ಕಂಡುಕೊಂಡಿದ್ದರು.

ಈ ಕಟ್ಟಡವನ್ನು ಮೊದಲು, 'ನೀಲಾಂಬರ ಮುಖರ್ಜಿಯ ತೋಟದ ಮನೆ' ಎಂದು ಕರೆಯುತ್ತಿದ್ದರು. ಹಲವಾರು ಪ್ರಸಂಗಗಳಲ್ಲಿ ಅದನ್ನು ಶ್ರೀಮಾತೆಯವರ ವಾಸ್ತವ್ಯಕ್ಕಾಗಿ ಮತ್ತು ಮಠದ ಚಟುವಟಿಕೆಗಳಿಗಾಗಿ ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದರು. ಕಡೆಯದಾಗಿ, ೧೯೮೪ರಲ್ಲಿ ಈ ಕಟ್ಟಡವು ಬೇಲೂರು ಮಠದ ಅಧೀನಕ್ಕೆ ಬಂದಿತು. ಅದನ್ನು ವ್ಯಾಪಕವಾಗಿ ಪುನರ್‌ನಿರ್ಮಾಣ ಮಾಡಿ, ೧೯೮೪ ರ ಡಿಸೆಂಬರ್ ೧೨ – ಶ್ರೀಮಾತೆಯವರ ಜನ್ಮದಿನದಂದು ಸಾರ್ವಜನಿಕರಿಗಾಗಿ ತೆರೆಯಲಾಯಿತು.

ಇಲ್ಲಿಗೆ ಬೇಲೂರು ಮಠದ ತೀರ್ಥಯಾತ್ರೆಯು ಮುಕ್ತಾಯಗೊಂಡಿತು. ನಮ್ಮ ತೀರ್ಥಯಾತ್ರೆಯ ಎರಡನೆಯ ಹಂತವು ಆರಂಭಗೊಳ್ಳುವುದು ದಕ್ಷಿಣೇಶ್ವರದ ಭೇಟಿಯಿಂದ.

(ಮುಂದಿನ ಸಂಚಿಕೆಯಲ್ಲಿ: **'ಬನ್ನಿ, ದಕ್ಷಿಣೇಶ್ವರಕ್ಕೆ'**)

# ಗೋಗಾ ಬಾಪಾ

ಹಿಂದಿ ಮೂಲ: ರಾಮೇಶ್ವರ ಟಾಂಟಿಯಾ  ಕನ್ನಡ ಅನುವಾದ: ಪ್ರೊ. ಶಶಿಕಲಾ ಸುಬ್ಬಣ್ಣ



ಚಿತ್ರ : ಶ್ರೀಕಾಂತ ಆಚಾರ್ಯ

**ರಾ**ಜಸ್ಥಾನದ ಕ್ಷತ್ರಿಯರ ಶೌರ್ಯ ಮತ್ತು ಬಲಿದಾನಗಳು ವಿಶ್ವದ ಇತಿಹಾಸದಲ್ಲಿ ಅದ್ವಿತೀಯವೆಂದು ಹೆಸರಾಗಿವೆ. ಮಾನ ಮತ್ತು ಸತೀತ್ವದ ರಕ್ಷಣೆಗಾಗಿ ಮಕ್ಕಳನ್ನು ಮಡಿಲಿನಲ್ಲಿ ಇರಿಸಿಕೊಂಡು ಸಾವಿರಾರು ಮಹಿಳೆಯರು ಧಗಧಗಿಸುವ ಜ್ವಾಲೆಯಲ್ಲಿ ಧುಮುಕಿ ಪ್ರಾಣಾರ್ಪಣೆ ಮಾಡಿರುವುದು ನಿಜಕ್ಕೂ ಉಜ್ವಲವಾದ ಉದಾಹರಣೆ. ಭಾರತವನ್ನು ಬಿಟ್ಟರೆ ಇಂಥ ನಿದರ್ಶನ ವಿಶ್ವದ ಬೇರೆ ಎಲ್ಲಿಯೂ ಕಾಣಸಿಗುವುದಿಲ್ಲ. ರಣಥಂಬೂರ್ ಮತ್ತು ಚಿತ್ತೂರಿನಲ್ಲಿ ಇಂಥ ಅನೇಕ 'ಜೌಹರ್'ಗಳಾಗಿವೆ. ಮೊಟ್ಟಮೊದಲನೆಯ ಜೌಹರ್ ಬಿಕಾನೇರಿನ ಭಾದರಾ ಎಂಬ ಹಳ್ಳಿಯ ಬಳಿ ಗೋಗಾಮಡಿ ಎಂಬಲ್ಲಿ ಸನ್ ೧೦೨೪ ರಲ್ಲಿ ನಡೆದಿತ್ತು. ಇದರಲ್ಲಿ ೭೦೦ ಕುಲವಧುಗಳು ಮಕ್ಕಳನ್ನು ತಮ್ಮ ಮಡಿಲಿನಲ್ಲಿ ಇರಿಸಿಕೊಂಡು ಬೆಂದು ಭಸ್ಮವಾಗಿದ್ದರು. ಘಜನಿಯ ಸೈನ್ಯ ಗೋಗಾಮಡಿಯನ್ನು ತಲುಪಿದಾಗ ಬೂದಿಯ ರಾಶಿ, ಅರೆಬೆಂದ ಮಾಂಸ ಚಕ್ಕಳಗಳು ಅದರ ಸುತ್ತ ಹಾರಾಡುತ್ತಿದ್ದ ಹದ್ದುಗಳು ಕಂಡುಬಂದಿದ್ದವು.

ಗೋಗಾಮಡಿ ಊರಿನ ಚೌಹಾನನಾಗಿದ್ದ ಸರದಾರ ಗೋಗಾಜಿಯ ಕಥೆಯು ಅದ್ಭುತವಾದದ್ದು. ಯೂರೋಪಿನಲ್ಲಿ ೧೨ನೇ ಶತಮಾನದಲ್ಲಿ ನಡೆದ ಕ್ರುಸೇಡ್ ಯುದ್ಧಗಳಲ್ಲಿ ಮಡಿದ ಅನೇಕ ನಾಯಕರುಗಳ, ಭಾರತದ ಜಯಮಲ್ಲ, ಪತ್ತಾ ಮತ್ತು ಸರದಾರ ವೀರ ಚೂಡಾವತರುಗಳ ಬಲಿದಾನಗಳಿಗಿಂತ, ಗೋಗಾಜಿಯ ಬಲಿದಾನವು ಹೆಚ್ಚು ಉಜ್ವಲವೂ ಅಮೂಲ್ಯವೂ ಆದದ್ದಾಗಿದೆ.

ಘಜನಿ ಮಹಮದ್‌ನ ೫೦ ಸಾವಿರ ಸುಸಜ್ಜಿತ ಸೈನ್ಯವನ್ನು ಕಂಡು ಹೆದರಿದ ಲೋಹಕೋಟ್ (ಲಾಹೋರ್) ಮತ್ತು ಮುಲ್ತಾನದ ಹಿಂದೂ ರಾಜನು ತನ್ನ ಸೈನ್ಯದೊಂದಿಗೆ ಅವನ ಕಡೆಗೆ ಸೇರಿಕೊಂಡಿದ್ದನು. ಮಾರ್ಗಮಧ್ಯದ ಸಾಮಂತರುಗಳು ಅಸಹಾಯಕತೆಯಿಂದ ಅವರನ್ನು ಸೇರಿಕೊಂಡರು. ಮರುಭೂಮಿಯನ್ನು ತಲುಪುವ ವೇಳೆಗೆ ಅವನ ಬಳಿ ೩೦ ಸಾವಿರ ಕುದುರೆ ಸವಾರರು ಮತ್ತು ೫೦ ಸಾವಿರ ಕಾಲಾಳುಗಳ ಸೈನ್ಯವಿತ್ತು.

ಘಜನಿ ಮಹಮದ್ ದಾರಿಯಲ್ಲಿ ಸಿಕ್ಕಿದ ಸಾಮಂತರುಗಳೊಡನೆ ಸಂಧಾನ ಮಾಡಿಕೊಳ್ಳುತ್ತಾ, ಸೋಮನಾಥದ ಪ್ರಸಿದ್ಧ ಮೂರ್ತಿಯನ್ನು ಧ್ವಂಸ ಮಾಡುವುದಕ್ಕಾಗಿ ಮುಂದುವರಿಯುತ್ತಿದ್ದನು. ಅವನು ಗುರ್ಜರ ದೇಶದ ಸಮೃದ್ಧಿಯನ್ನು ಕುರಿತು ಕೇಳಿದ್ದ. ಅಲ್ಲಿಗೆ ಹೋಗಿ ಲೂಟಿ ಮಾಡುವ ದುರಾಸೆ ಅವನ ಸೈನಿಕರಿಗೂ ಮತ್ತು ಮಹಾದೇವನ ಮೂರ್ತಿಯನ್ನು ಖಂಡತುಂಡವಾಗಿ ಒಡೆದುಹಾಕಿ ಮಹಮದೀಯ ವೀರನೆನ್ನಿಸಿಕೊಳ್ಳುವ ಆಕಾಂಕ್ಷೆ ಘಜನಿ ಮಹಮದ್‌ಗೂ ಇತ್ತು. ಅದಕ್ಕಾಗಿ ಅವನು ಭಾಟಿ ಪ್ರದೇಶವನ್ನು (ಈಗಿನ ಬಿಕಾನೇರ್ ಕ್ಷೇತ್ರ) ದಾಟಿಕೊಂಡು ಲಾಹೋರ್ ಮಾರವಾಡದ ಮಾರ್ಗವಾಗಿ ಸೌರಾಷ್ಟ್ರವನ್ನು ತಲುಪಬೇಕಾಗಿತ್ತು. ದಾರಿಯಲ್ಲಿ ಗೋಗಾಮಡಿಯಿತ್ತು. ಅಲ್ಲಿಯ ವೃದ್ಧ ಸರದಾರ ಗೋಗಾಜಿಯ ಯಶೋಗಾಥೆಯನ್ನು ಅವನು ಕೇಳಿದ್ದ.

ಘಜನಿ ಮಹಮದ್ ತನ್ನ ಸೇನಾಪತಿಯಾದ ಸಾಲಾರ್ ಮುಹಮ್ಮದನ ಕೈಯಲ್ಲಿ ಮುತ್ತು ವಜ್ರ ವೈಡೂರ್ಯಗಳಿದ್ದ ತಟ್ಟೆಯನ್ನು ಕೊಟ್ಟು, ದೇಶದ್ರೋಹಿಯೂ ಧರ್ಮದ್ರೋಹಿಯೂ ಆದ ತಿಲಕ ಎಂಬ ಭಾರತೀಯನೊಂದಿಗೆ ಗೋಗಾ ಬಾಪಾನ ಬಳಿಗೆ ಕಳುಹಿಸಿದನು. ಅವನು ಗೋಗಾ ಬಾಪಾನಿಗೆ, "ಅಮೀರನಾದ ಘಜನಿ ಮಹಮದ್ ತನ್ನ ಸೈನ್ಯದೊಂದಿಗೆ ತಮ್ಮ ಕ್ಷೇತ್ರದ ಮೂಲಕ ಪ್ರಭಾಸ್ ಪಾಟನ್‌ಗೆ ಹೋಗುತ್ತಿದ್ದಾನೆ. ಅವನಿಗೆ ತಮ್ಮ ಸಹಾಯ ಬೇಕಾಗಿದೆ" ಎಂದು ಹೇಳಿದನು.

ಈ ಮಾತನ್ನು ಕೇಳಿದ ೯೦ ವರ್ಷದ ಗೋಗಾ ಬಾಪಾನ ಶರೀರವು ಕೋಪದಿಂದ ಕಂಪಿಸತೊಡಗಿತು. ಗಂಭೀರವಾದ ಗರ್ಜನೆ ಮಾಡುತ್ತಾ, "ನಿನ್ನ ಅಮೀರ ಸೋಮನಾಥನ ವಿಗ್ರಹವನ್ನು ಒಡೆದುಹಾಕಲು ಹೋಗುತ್ತಿದ್ದಾನೆ. ಇದಕ್ಕೆ ನನ್ನ ಸಹಾಯ ಕೇಳುತ್ತಿದ್ದಾನೆ. ನೀನು ಒಬ್ಬ ಹಿಂದೂವಾಗಿ ಅವನಿಗೆ ಸಹಾಯ